ಸಿ.ಸಿ..ನಂ.299/2022

ಪಿ.ಡಬ್ಲ್ಯೂ-1

ದಿನಾಂಕ.12-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಎಸ್ ಪಿ ವಕೀಲರಿಂದಃ**

1. ಈ ಆರೋಪಿಯು ನಮ್ಮ ಬ್ಯಾಂಕಿನಲ್ಲಿ ಎಷ್ಟು ತರಹದ ಸಾಲ ಮಾಡಿದ್ದಾನೆ ಎಂದರೆ ವಾಹನದ ಸಾಲ ಮಾಡಿರುತ್ತಾನೆ . ಇದು ಕೂಡ ವಾಹನದ ಸಾಲ ಮೊದಲು ಇದ್ದದ್ದು ಕೂಡ ವಾಹನದ ಸಾಲ . ಅದನ್ನು ಆತನು ಮರು ಪಾವತಿ ಮಾಡಿರುತ್ತಾನೆ. ಆರೋಪಿಯು ನಮ್ಮ ಬ್ಯಾಂಕಿನಲ್ಲಿ 2-3 ವಾಹನದ ಸಾಲ ಮಾಡಿರುತ್ತಾನೆ. ಆತನು ಎಷ್ಟು ಸಾಲ ಮಾಡಿದ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಮಾಹಿತಿ ಇರುತ್ತದೆ ಹಿಂದೆ ಮಾಡಿದ ಬಾಕಿ ಎಲ್ಲಾ ಸಾಲವನ್ನು ಆರೋಪಿಯು ತೀರಿಸಿರುತ್ತಾನೆ. ಹಾಗಾದರೆ ಈಗ ಆರೋಪಿಯ ಹೆಸರಿನಲ್ಲಿ ಒಂದು ಸಾಲ ಮಾತ್ರ ಬಾಕಿ ಇರುತ್ತದೆ ಎಂದರೆ ಸರಿ. ಈ ಸಾಲದಲ್ಲಿ ಆರೋಪಿಯು ಬ್ಯಾಂಕಿಗೆ ಎಷ್ಟು ಹಣ ತುಂಬಿರುತ್ತಾನೆ ಎಂದರೆ ಆತನು ರೂ 3 ಲಕ್ಷ ಸಾಲ ತೆಗೆದಿದ್ದು ಅದರಲ್ಲಿ ರೂ 2,10,000 ಬಾಕಿ ಇರುತ್ತದೆ ರೂ 90 ಸಾವಿರ ತುಂಬಿರುತ್ತಾನೆ . ಆತನು ತುಂಬಿದ ಅಷ್ಟು ಹಣವನ್ನು ಅಸಲಿಗೆ ಹಾಕಿರುತ್ತೀರಿ ಎಂದರೆ ಆತನು ತುಂಬಿದ ರೂ 90 ಸಾವಿರ ಕ್ಕಿಂತ ಹೆಚ್ಚಿಗೆ ಹಣ ಇರಬಹುದು .ಅದರಲ್ಲಿ ಬಡ್ಡಿ ಬಿಟ್ಟು ರೂ 90 ಸಾವಿರ ಅಸಲಿಗೆ ಹೋಗಿರುತ್ತದೆ ಈ ಸಾಲಕ್ಕೆ ಆತನು ಒಟ್ಟು ಎಷ್ಟು ಹಣ ತುಂಬಿರುತ್ತಾನೆ ಅದನ್ನು ಲೆಡ್ಜರ ನೋಡಿ ಹೇಳಬೇಕಾಗುತ್ತದೆ . ಅದನ್ನು ನಾನು ಈಗಾಗಲೆ ಹಾಜರು ಪಡಿಸಿರುತ್ತೇನೆ . ಲೆಡ್ಜರ ಎಕ್ಸಟ್ರಾಕ್ಟ ದಲ್ಲಿ ಎಷ್ಟು ಹಣ ತುಂಬಿರುತ್ತಾರೆ ಎಂದರೆ ಅದರ ದಾಖಲಾತಿಯನ್ನು ನೋಡಿ ಹೇಳಬೇಕಾಗುತ್ತದೆ ಆ ದಾಖಲಾತಿ ಹಾಜರ ಪಡಿಸದೆ ಇದ್ದರೆ ನ್ಯಾಯಾಲಯ ಆದೇಶಿಸಿದರೆ ಹಾಜರು ಪಡಿಸುತ್ತೇನೆ .ಕರಾರು ಮಾಡುವಾಗ ಎಲ್ಲಾ ದಾಖಲಾತಿಗಳನ್ನು ಬ್ಯಾಂಕಿನವರು ಅವರಿಗೆ ಕೊಟ್ಟುತ್ತಾರೆ ಎಂದರೆ ಸರಿ . ಹಾಗಾದರೆ ಆರೋಪಿಯು ಎಷ್ಟು ಸಾಲ ತೆಗೆದಿರುತ್ತಾನೆ ಮತ್ತು ಎಷ್ಟು ಹಣ ತುಂಬಿರುತ್ತಾನೆ ಎಂಬ ಬಗ್ಗೆ ನನಗೆ ಮಾಹಿತಿ ಇದೆ . ನೀವು ಸದ್ರಿ ಲೆಡ್ಜರ ಎಕ್ಸಟ್ರಾಕ್ಸ ವನ್ನು

ಉದ್ದೇಶಪೂರಕವಾಗಿ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ . ಆರೋಪಿಯು ಈ ವಾಹನಕ್ಕೆ ಎಲ್ಲಾ ಸಾಲವನ್ನು ಚುಕ್ತಾ ಮಾಡಿರುತ್ತಾನೆ ಎಂದರೆ ಸರಿಯಲ್ಲ . ಆತನು ಹಣವನ್ನು ಚುಕ್ತಾ ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ಗೊತ್ತಾಗುತ್ತದೆ ಎಂಬ ಕಾರಣದಿಂದ ಆ ದಾಖಲಾತಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ಈ ಸಾಲಕ್ಕೆ ಸಂಬಂಧಿಸಿದಂತೆ ಜಾಮೀನುದಾರರ ಮೇಲೆ ಪ್ರಕರಣ ಹಾಕಿರುತ್ತೀರಾ ಎಂರದೆ ಅವರ ಮಗನಾದ ಅಮರ ಸುರೇಶ ನಾಯ್ಕು ರವರ ಮೇಲೆ ಪ್ರಕರಣ ಹಾಕಲಾಗಿರುತ್ತದೆ . ಅವರು ಸುರೇಶ ನಾಯ್ಕು ನ ಮೇಲೆ ಚೆಕ್ ಬೌನ್ಸ ಪ್ರಕರಣ ಹಾಗೂ ಅಮಲ್ಜಾರಿ ಪ್ರಕರಣ ಇರುತ್ತದೆ . ಇದೆ ಸಾಲವನ್ನು ವಸೂಲಿ ಮಾಡುವದಗೋಸ್ಕರ ಜಾಮಿನುದಾರರ ಮೇಲೆ ನೀವು ಎರಡು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಅವರು ಬೇರೆ ಸಾಲ ತೆಗೆದುಕೊಂಡಿರುತ್ತಾರೆ . ಈ ಪರಕರಣಕ್ಕೆ ಸಂಬಧಿಸಿದಂತೆ ಆರೋಪಿಯ ಮೇಲೆ ಮತ್ತು ಜಾಮೀನುದಾರರ ಮೇಲೆ ಸೇರಿ ಕೊಂಡು ಒಟ್ಟು 4 ಪ್ರಕರಣವನ್ನು ನ್ಯಾಯಾಲಯದಲ್ಲಿ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ . ಅದಕ್ಕಾಗಿ ನೀವು ವಾಹನದ ಯಾವುದೇ ದಾಖಲಾತಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ಒಂದು ವೇಳೆ ವಾಹನದ ಕಾಗದ ಪತ್ರಗಳನ್ನು ಹಾಜರು ಪಡಿಸಿದರೆ ನಿಜಾಂಶ ಹೊರಗೆ ಬರುತತದೆ ಎಂಬ ಕಾರಣದಿಂ ಆ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರ ಪಡಿಸಿಲ್ಲ ಎಂದರೆ ಸರಿಯಲ್ಲ . ಈಃ ಹಿಂದೆ ಆರೋಪಿಯು ಹಿಂದಿನ ಸಾಲದ ಭದ್ರತೆಗಾಗಿ ನೀಡಿದ ಚೆಕ್ ನ್ನು ದುರುಪಯೊೀಗ ಪಡಿಸಿಕೊಂಡು ಸುಳ್ಳು ದೂರನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ . ಆ ಚೆಕ ಮೇಲೆ ಇರುವ ಸಹಿಯನ್ನು ಆರೋಪಿ ಯಿಂದ ಪಡೆದುಕೊಂಡಿದ್ದನ್ನು ಹೊರತು ಪಡಿಸಿ ಉಳಿದ ಎಲ್ಲಾ ಬರವಣಿಗೆ ನಿವೇ ಮಾಡಿರುತ್ತೀರಿ ಎಂದರೆ ಸರಿಯಲ್ಲ . ಒಂದು ಸಾಲಕ್ಕೆ ಸಂಬಧಿಸಿದಂತೆ ಒಂದೇ ಕೇಸ್ ದಾಖಲಿಸಬೇಕು ಎಂದರೆ ಸರಿಯಲ್ಲ . ನೀವು ಆರೋಪಪಿಯ ಮೇಲೆ ಒಟ್ಟು 4 ಪ್ರಕರಣ ದಾಖಲಿಸಿ ಆರೋಪಿಗೆ ಮಾನಸಿಕವಾಗಿ ತೊಂರದೆ ಕೊಡಬೇಕು ಎಂದರೆ ಸರಿಯಲ್ಲ . ಆರೋಪಿಯ ಬ್ಯಾಂಕ ಖಾತೆ ಯಲ್ಲಿ ಎಷ್ಟು ಹಣ ಇರುತ್ತದೆ ಎಂದರೆ ನನಗೆ ನೆನಪಿಲ್ಲ . ಅದೇ ರೀತಿ ಆರೋಪಿಯ ಸಾಲದ ಅರ್ಜಿಯಲ್ಲಿ ಸಲ್ಲಿಸುವಾಗ ನೀಡಿದ ಶೇರು ಹಣ ಕೂಡ ನಿಮ್ಮ ಸಂಸ್ಥೆಯಲ್ಲಿ ಸಾಕಷ್ಟು ಇರುತ್ತದೆ ಎಂದರೆ ಅದನ್ನು ನೋಡಿ ಹೇಳಬೇಕು . ಆರೋಪಿಯ

ಹೆಸರಿನಲ್ಲಿ ನಿಮ್ಮ ಬ್ಯಾಂಕ ನಲ್ಲಿ ಆರ್ ಡಿ ಖಾತೆ ಇರುತ್ತದೆ ಎಂದರೆ ಅದನ್ನು ನಾನು ನೋಡಿ ಹೇಳಬೇಕು . ಆರೋಪಿಯ ಹೆಸರಿನಲ್ಲಿ ಒಟ್ಟು ಎಷ್ಟು ಆರ್ . ಡಿ ಖಾತೆ ಇರಬಹುದು ಎಂದರೆ 3 ರಿಂದ 4 ಆರ್ ಡಿ ಖಾತೆ ಇರುತ್ತದೆ . ಹಳೆಯ ವಾಹನ ಸಾಲಕ್ಕೆ ಸಂಬಂಧಿಸಿದಂತೆ ಇರುವ ಆರ್ .ಡಿ ಹಣವನ್ನು ವಾಹನ ಸಾಲವನ್ನು ಚುಕ್ತಾ ಮಾಡಿದ್ದು ಆತನ ಆ ಖಾತೆಗೆ ಹಣ ಹಾಕಲಾಗಿರುತ್ತದೆ . ಆರ ಡಿ ಖಾತೆ ಒಟ್ಟು ಎಷ್ಟು ಹಣ ಇರುತ್ತದೆ ಎಂದು ನನಗೆ ನೆನಪಿಲ್ಲ . 4 ಆರ್ . ಡಿ ಖಾತೆಗಳ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಅದು ಈ ಸಾಲಕ್ಕೆ ಸಂಬಂಧಿಸಿದ್ದಲ್ಲ . ಅದು ಹಳೆಯ ಸಾಲದ ಖಾತೆಯ ಪ್ರಕರಣಕ್ಕೆ ಸಂಬಂಧಿಸಿದ್ದು ಆಗಿದೆ . 2017 ನೇ ಸಾಲಿನ ಈ ಸಾಲಕ್ಕೆ ಸಂಬಂಧಿಸಿದಂತೆ ಒಟ್ಟು ಎಷ್ಟು ಆರ ಡಿ ಖಾತೆ ಇದೆ ಎಂದರೆ ಆರ್ . ಡಿ ಖಾತೆ ಮಾಡಿಲ್ಲ ಒಂದು ಸಾಲಕ್ಕೆ ಸಂಬಂಧಿಸಿದಂತೆ ಆರ ಡಿ ಖಾತೆ ಮಾಡಿದ್ದೇನೆ .

2. ಆರೋಪಿಯ ಹೆಸನರಿಲ್ಲಿ ಈ ಸಾಲದ ನಂತರ ಒಟ್ಟು ಎಷ್ಟು ಹಣ ತುಂಬಿದ ಆರ್ .ಡಿ ಖಾತೆ ಇದೆ ಎಂದರೆ ಬೇರೆ ಖಾತೆಗಳಿಗೆ ಸಂಬಂಧಿಸಿದಂತೆ ಇರುತ್ತದೆ ಅದಕ್ಕೂ ಈ ಪ್ರಕರಣಕ್ಕೂ ಯಾವುದೆ ಸಂಬಂದ ಇಲ್ಲ . ದಿಃ 10-01-2017 ರ ಪ್ರಕಾರ ಆರೋಪಿಗೆ ಒಂದೇ ಆರ ಡಿ ಖಾತೆ ಇರುವುದು ಮತ್ತು ಒಂದೇ ಸಾಲ ಇರುವುದು ಎಂದರೆ ಒಂದೇ ಆರ ಡಿ ಖಾತೆ ಆದರೆ ಅದು ಮುಕ್ತಾಯಗೊಂಡಿರುತ್ತದೆ ಎಂದು ನೋಡಬೇಕು ಸ್ದ್ರಿ ಆರ ಡಿ ಖಾತೆಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ ಎಂದರೆ ಸರಿ . ಆರೋಪಿಯ ಹೆಸರಿನಲ್ಲಿ ಇದೊಂದು ಸಾಲ ಬಿಟ್ಟರೆ ಬೇರ ಸಾಲ ಯಾವುದೂ ನಿಮ್ಮ ಬ್ಯಾಂಕಿನಲ್ಲಿ ಇಲ್ಲ ಎಂದರೆ ಸರಿ. ಹಾಗಾದರೆ ದಿಃ 10-01-2017 ರಂದು ಆರೋಪಿಯ ಸಾಲ ಮತ್ತು ಜಾಮಿನುದಾರರಿಗೆ ಸಂಬಂಧಿಸಿದಂತೆ ಬೇರೆ ಯಾವುದೇ ಪ್ರಕರಣ ಇರುವುದಿಲ್ಲ ಎಂದರೆ ಸರಿ .ಆರ ಡಿ ಖಾತೆಗೆ ಸಂಬಧಿಸಿದಂತೆ ಒಂದು ಪಾಸ ಬುಕ ನ್ನು ಮಾಡುತ್ತೇವೆ . ಈವರೆಗೆ ಆರೋಪಿಯ ಹೆಸರಿನಲ್ಲಿ ಒಟ್ಟು ಡಿಪೊಜಿಟ ಇರುತ್ತದೆ ಎಂದರೆ ಡಿಪೊಜಿಟ ಇಲ್ಲ . ಆರೋಪಿಯ ಉಳಿತಾಯ ಖಾತೆಯಲ್ಲಿ ಒಟ್ಟು ಹಣ ಜಮಾ ಆಗಿರುತ್ತದೆ ಎಂದರೆ ನನಗೆ ನೆನಪಿಲ್ಲ . ಉಳಿತಾಯ ಖಾತೆಗೆ ಎಷ್ಟು ಹಣ ಬಾಕಿ ಇರುತ್ತದೆ ಎಂದು ನೀವು ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಅವಶ್ಯ ಇದ್ದರೆ ಹಾಜರ ಪಡಿಸುತ್ತೇನೆ. ಆರೋಪಿಯ ಹೆಸರಿನಲ್ಲಿ ಸಾಕಷ್ಟು ಉಳಿತಾಯ ದ ಹಣ ಇರುತ್ತದೆ ಆದರೂ ಸಹ ನಿಜಾಂಶ ಗೊತ್ತಾಗುತ್ತದೆ ಎಂದು ಅವುಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ

ಎಂದರೆ ಸರಿಯಲ್ಲ . ಆರೋಪಿಯು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಸಾಲವನ್ನು ಈ ಹಿಂದೆ ಚುಕ್ತಾ ಮಾಡಿರುತ್ತಾನೆ ಎಂದರೆ ಸರಿಯಲ್ಲ . ಹಿಂದಿನ ಸಾಲಕ್ಕೆ ಬದ್ರತೆಗಾಗಿ ಪಡೆದುಕೊಂಡ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಅದನ್ನೆ ಈ ಪ್ರಕರಣಕ್ಕೆ ಹಾಜರು ಪಡಿಸಿ ಸುಳ್ಳು ಕೇಸ್ ನ್ನು ಆರೋಪಿಯ ವಿರುದ್ದ ಹಾಕಿರುತ್ತೀರಿ ಎಂದರೆ ಸರಿಯಲ್ಲ . ಆರೋಪಿಯು ಹಣವನ್ನು ತುಂಬಿಲ್ಲ ಎಂಬ ಕಾಣಕ್ಕೆ ನಮ್ಮ ಬ್ಯಾಂಕಿನಿಂದ ನೋಟಿಸು ಕೊಟ್ಟಿರುತ್ತೇವೆ. ಆ ರೀತಿ ನೋಟಸು ಕೊಟ್ಟಿದ್ದರ ಬಗ್ಗೆ ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಆ ರೀತಿಯಾದ ನೋಟಿಸನ್ನು ನೀವು ಕೊಟ್ಟದ್ದು ಇಲ್ಲ ಆ ಕಾರಣದಿಂದ ಅದನ್ನು ನೀವು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಪುನಃ ಮುಂದುವರೆದು ಅವಶ್ಯ ಇದ್ದರೆ ಹಾಜುರು ಪಡಿಸುತ್ತೇನೆ . ಆರೋಪಿಗೂ ಈ ಪ್ರಕಣಕ್ಕೆ ಸಂಬಧಿಸಿದಂತೆ ಚೆಕ್ ನ್ನು ನೀಡಿದ್ದು ಇಲ್ಲ ಎಂದರೆ ಸರಿಯಲಲ್ಲ ಆರೋಪಿಗೆ ನೀವು ಈ ಪ್ರಕರಣಕ್ಕೆ ನೋಟಿಸು ಕೊಟ್ಟದ್ದು ಇಲ್ಲ ಎಂದರೆ ಸರಿಯಲ್ಲ . ಹಿಂದೆ ಪಡೆದ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಆರೋಪಿಯು ನಮ್ಮ ಬ್ಯಾಂಕಿನಿಂದ ಸಾಲ ಪಡೆದುಕೊಂಡು ಅದಕ್ಕೆ ಸಂಬಂಧಿಸಿದಂತೆ ಮರು ಪಾವತಿಗಾಗಿ ಸದ್ರಿ ಚೆಕ್ ನ್ನು ನೀಡಿರುತ್ತಾರೆ ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂರೆ ಸರಿಯಲ್ಲ . ಆರೋಪಿಗೂ ಈ ಸಾಲಕ್ಕೂ ಯಾವುದೆ ಪ್ರಕರಣ ಇಲ್ಲ ಎಂದರೆ ಸರಿಯಲ್ಲ .

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.